ದೊಡ್ಡಬಳ್ಳಾಪುರ ನಗರ ಸಭೆವತಿಯಿಂದ ಹಂಚಲಾದ ನಿವೇಶನಗಳು

2042 (2481) : ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕಳೆದ 3 ವರ್ಷಗಳಲ್ಲಿ ದೊಡ್ಡಬಳ್ಳಾಪುರ ನಗರಸಭೆ ಮತಿಯಿಂದ ಹಂಚಲಾದ ನಿವೇಶನಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟನ್ನು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರಿಗೆ ಹಂಚಲಾಗಿದೆ; (ವರ್ಷವಾರು ವಿವರಗಳನ್ನು ನೀಡುವುದು)?

(ಆ) ಹಂಚಲು ಇನ್ನೂ ಎಷ್ಟು ನಿವೇಶನಗಳು ಇರುತ್ತವೆ; ಇವುಗಳನ್ನು ಎಂದು ಹಂಚಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

(ಅ) ದೊಡ್ಡಬಳ್ಳಾಪುರ ನಗರ ವಸತಿ ಸಮಿತಿಯ ಮೂಲಕ ಆಶ್ರಯ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 200 ನಿವೇಶನಗಳನ್ನು ಹಂಚಲಾಗಿದೆ.

ವರ್ಷ	ಪ.ಜಾ.	ಪ.ಪಂ.	ಇತರೆ	ಒಟ್ಟು
1997-98	31	10	127	168
1998-99	14	05	13	32
1999-2000	-	-	-	-
	45	15	140	200

(ಆ) ವೀರಭದ್ರನಪಾಳ್ಯದ ಸರ್ವೆ ನಂ.25 ರಲ್ಲಿ 3.12 ಎಕರೆ ಜಮೀನನ್ನು ದೊಡ್ಡಬಳ್ಳಾಪುರ ತಹಸೀಲ್ದಾರ್‌ರವರು ನಗರಸಭೆಯ ವಶಕ್ಕೆ ಹಸ್ತಾಂತರಿಸಿದ್ದು, ಹೊಸದಾಗಿ ನಗರ ವಸತಿ ಸಮಿತಿಯು ರಚನೆಯಾದ ನಂತರ ನವೇಶನಗಳನ್ನು ಹಂಚಲು ಕ್ರಮ ವಹಿಸಲಾಗುವುದು.

ಬಿಸಿಎಂ ಹಾಸ್ಟೆಲ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸೌಕರ್ಯ

2043 (2473) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲ್ ಹೂಂಗಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿರುವ ಬಿ.ಸಿ.ಎಂ. ಹಾಸ್ಟೆಲ್‌ಗಳಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)?

(ಆ) ಪ್ರತಿ ವರ್ಷ ಈ ವಿದ್ಯಾರ್ಥಿಗಳಿಗೆ ಸರ್ಕಾರ ಖರ್ಚು ಮಾಡುತ್ತಿರುವ ಹಣ ಎಷ್ಟು?

(ಇ) ಪ್ರತಿಯೊಬ್ಬ ವಿದ್ಯಾರ್ಥಿಗೆ ಖರ್ಚು ಮಾಡಲಾಗುವ ಹಣ ಎಷ್ಟು? ಮತ್ತು ಬೇರೆ ಯಾವ ಸೌಕರ್ಯ ಒದಗಿಸಲಾಗಿದೆ?

(ಈ) ಈ ಬಗ್ಗೆ ಕೇಂದ್ರ ಸರ್ಕಾರದಿಂದ ದೊರೆಯುವ ಅನುದಾನ ಎಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ 53669 ವಿದ್ಯಾರ್ಥಿಗಳು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ 10530 ವಿದ್ಯಾರ್ಥಿಗಳು ಹೀಗೆ ಒಟ್ಟು 64199 ವಿದ್ಯಾರ್ಥಿಗಳು ವಾಸಿಸುತ್ತಿದ್ದಾರೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

(ಆ) ವಾರ್ಷಿಕವಾಗಿ ವಿದ್ಯಾರ್ಥಿನಿಲಯಗಳಲ್ಲಿಯ ವಿದ್ಯಾರ್ಥಿಗಳಿಗೆ ರೂ.4964.00 ಲಕ್ಷ ಹಣವನ್ನು ವೆಚ್ಚ ಮಾಡಲಾಗುತ್ತಿದೆ.

(ಇ) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿಯ ಪ್ರತಿ ವಿದ್ಯಾರ್ಥಿಗೆ ಊಟದ ವೆಚ್ಚಕ್ಕಾಗಿ ಮಾಸಿಕವಾಗಿ ರೂ.350.00 ರಂತೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ರೂ.400.00 ರಂತೆ ಊಟದ ವೆಚ್ಚಕ್ಕಾಗಿ ಖರ್ಚು ಮಾಡಲಾಗುತ್ತಿದೆ.

ಇದಲ್ಲದೆ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.100ರ ವೆಚ್ಚದಲ್ಲಿ ಪಠ್ಯಪುಸ್ತಕ ರೂ.300-00ರ ವೆಚ್ಚದಲ್ಲಿ ಸಮವಸ್ತ್ರ ರೂ.250ರ ವೆಚ್ಚದಲ್ಲಿ ಸೋಪು, ಹಲ್ಲುಪುಡಿ, 3 ವರ್ಷಕ್ಕೊಮ್ಮೆ ರೂ.300-00ರ ವೆಚ್ಚದಲ್ಲಿ ಹಾಸಿಗೆ ಹೊದಿಕೆ, ಇದಲ್ಲದೆ ಅಲ್ಪಕಾಲಿಕ ಬೋಧಕರಿಂದ ಮೂಲ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠದ ವ್ಯವಸ್ಥೆ ವೈದ್ಯಕೀಯ ಸೌಲಭ್ಯ, ಆಟದ ಉಪಕರಣಗಳನ್ನು ಸಹ ಸರಬರಾಜು ಮಾಡಲಾಗುತ್ತಿದೆ.

(ಈ) ಹಾಲಿ ಕೇಂದ್ರ ಸರ್ಕಾರದಿಂದ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಅನುದಾನ ದೊರೆಯುತ್ತಿಲ್ಲ.

ಅನುಬಂಧ-1

ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳ ಜಿಲ್ಲಾವಾರು ಮಾಹಿತಿ 1999-2000.

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳು	ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳು	ಒಟ್ಟು
1.	ಬೆಂಗಳೂರು (ನಗರ)	653	350	1003
2.	ಬೆಂಗಳೂರು (ಗ್ರಾಮಾಂತರ)	2203	250	2452
3.	ಬಳ್ಳಾರಿ	1740	325	2065
4.	ಬೆಳಗಾಂ	4665	440	5105

1	2	3	4	5
5.	ಬೀದರ್	2114	358	2472
6.	ಬಿಜಾಪುರ	2390	237	2627
7.	ಬಾಲಗಕೋಟೆ	1485	235	1720
8.	ಚಿಕ್ಕಮಗಳೂರು	2436	478	2914
9.	ಚಿತ್ರದುರ್ಗ	2178	265	2443
10.	ಚಾಮರಾಜನಗರ	619	152	771
11.	ದಕ್ಷಿಣ ಕನ್ನಡ	1046	448	1604
12.	ಧಾರವಾಡ	965	336	1301
13.	ದಾವಣಗೆರೆ	1868	286	2154
14.	ಗುಲ್ಬರ್ಗಾ	4002	690	4692
15.	ಗದಗ್	1300	100	1400
16.	ಹಾಸನ	2765	584	3319
17.	ಹಾವೇರಿ	1980	170	2150
18.	ಕೊಡಗು	759	172	931
19.	ಕೋಲಾರ	3014	490	3504
20.	ಕೊಪ್ಪಳ	1715	146	1861
21.	ಮಂಡ್ಯ	2174	680	2851
22.	ಮೈಸೂರು	2190	680	2870
23.	ರಾಯಚೂರು	1564	333	1897
24.	ಶಿವಮೊಗ್ಗ	2686	1175	3861
25.	ತುಮಕೂರು	1964	433	2397
26.	ಉತ್ತರ ಕನ್ನಡ	2254	341	2595
27.	ಉಡುಪಿ	941	266	1207
	ಒಟ್ಟು	53669	10530	64199